ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮಹಮದ್ ನವಾಜ್

ಮೈಲೆಪಲ್ಲೆ ವೈಭವಿ -ವಿರುದ್ಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಇತರರು

ರಿಟ್ ಅರ್ಜಿ ಸಂಖ್ಯೆ: 292021/2018, ದಿನಾಂಕ: 12ನೇ ಜುಲೈ, 2018

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್ (ಮೌಖಿಕ):

1. ಈ ರಿಟ್ ಅರ್ಜಿಯಲ್ಲಿ, ವೈದ್ಯಕೀಯ/ದಂತ ವೈದ್ಯಕೀಯ ಕೋರ್ಸುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿರುವಂಥ ಅರ್ಜಿದಾರರು, 2018-19ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಸ್ನಾತಕ ನೀಟ್ 2018 ರ ಅರ್ಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಕೇಂದ್ರೀಕೃತ ಸಮಾಲೋಚನೆಗಾಗಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವು ಜಂಟಿಯಾಗಿ ಹೊರಡಿಸಿದ ಮಾಹಿತಿ ಬುಲೆಟಿನ್ (ಸಂಕ್ಷಿಪ್ತವಾಗಿ ದಿ ಬುಲೆಟಿನ್ ಎಂದು ಕರೆಯಲಾಗಿದೆ) ನ 4 ನೇ ಅಧ್ಯಾಯದ 2.2 ನೇ ಖಂಡದ ಪರಂತುಕದ ಸಿಂಧುತ್ವವನ್ನು ಪ್ರಶ್ನಿಸಿರುತ್ತಾರೆ.ಪರಂತುಕವು ಭಾರತ ಸಂವಿಧಾನದ 14, 29 ಹಾಗೂ 30 ನೇ ಅನುಚ್ಛೇದಗಳ ಉಲ್ಲಂಘನೆ ಯಾಗಿರುತ್ತದೆಂಬುದು ಈ ಪ್ರಶ್ನೆಗೆ ಆಧಾರವಾಗಿರುತ್ತದೆ.2.2 ನೇ ಖಂಡವು ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರುವ ಅಭ್ಯರ್ಥಿಗಳನ್ನು ನಿರ್ಧರಿಸುವ ಮಾನದಂಡವನ್ನು ನಿರೂಪಿಸುತ್ತದೆ; ಅದನ್ನು ಈ ಮುಂದಿನಂತೆ ಓದಲಾಗಿದೆ:

" 2.2.ಭಾಷಾ ಅಲ್ಪಸಂಖ್ಯಾತ ವರ್ಗದ ಅರ್ಹತೆ:

ಭಾಷಾ ಅಲ್ಪಸಂಖ್ಯಾತ ಮೀಸಲಾತಿಯು ಕರ್ನಾಟಕದ ತಮಿಳು, ತೆಲುಗು, ಕೊಡವ ಹಾಗೂ ತುಳು ಭಾಷಾ ಅಭ್ಯರ್ಥಿಗಳಿಗೆ ಹಾಗೂ ಅಧಿವಾಸಿತ ಅಭ್ಯರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ.

ಪರಂತು ಆತ/ಆಕೆ, ಅರ್ಹತಾ ಪರೀಕ್ಷೆಗೆ 1 ನೇ ತರಗತಿಯಿಂದ ಹತ್ತು ವರ್ಷಗಳ ಅವಧಿಯಷ್ಟು ಕಾಲ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರಬೇಕಾಗುತ್ತದೆ ಹಾಗೂ ಎಸ್.ಎಸ್.ಎಲ್.ಸಿ/10 ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ/12 ನೇ ತರಗತಿಯನ್ನು ಕರ್ನಾಟಕ ರಾಜ್ಯದಲ್ಲಿ ತೇರ್ಗಡೆ ಹೊಂದಿರಬೇಕಾಗಿರುತ್ತದೆ. "

ಬುಲೆಟಿನ್ನ ಮೂಲ ಪ್ರತಿಯನ್ನು ಹಾಜರುಪಡಿಸುವುದರಿಂದ ವಿನಾಯಿತಿ ನೀಡಲಾಗಿದ್ದು, ತದನುಸಾರವಾಗಿ ಐ.ಎ. ಸಂಖ್ಯೆ .1/2018 ನ್ನು ವಿಲೆ ಮಾಡಲಾಗಿದೆ.

2. ನಾವು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಹಾಗೂ ಪ್ರತ್ಯರ್ಜಿದಾರ ಸಂಖ್ಯೆ .3 ಹಾಗೂ 4 ರ ಪರ ಮಾನ್ಯ ಅಡ್ವಕೇಟ್ ಜನರಲ್ರವರ ವಾದವನ್ನು ಆಲಿಸಿ, ದಾಖಲೆಯನ್ನು ಪರಿಶೀಲಿಸಿರುತ್ತೇವೆ.

3. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಅರ್ಜಿದಾರರು ಕರ್ನಾಟಕದಲ್ಲಿಯೇ ಜನಿಸಿದವರಾಗಿದ್ದು, ಕರ್ನಾಟಕದಲ್ಲಿ ನಾಲ್ಕು ವರ್ಷಗಳ ಕಾಲ ವ್ಯಾಸಂಗ ಮಾಡಿರುತ್ತಾರೆ.ಈಕೆ ಕರ್ನಾಟಕದಲ್ಲಿ 9 ಹಾಗೂ 10 ನೇ ತರಗತಿಗಳನ್ನು ಹಾಗೂ I ಮತ್ತು II ಪಿ.ಯು.ಸಿ. ಯನ್ನು 2013-14ರಿಂದ 2016-17 ಶೈಕ್ಷಣಿಕ ವರ್ಷಗಳಲ್ಲಿ ವ್ಯಾಸಂಗ ಮಾಡಿರುತ್ತಾರೆ.ಇವರ ಮಾತೃ ಭಾಷೆ ತೆಲುಗು ಆಗಿರುತ್ತದೆ.ಅರ್ಜಿದಾರರ ತಾಯಿ ಕರ್ನಾಟಕದಲ್ಲಿ ನೆಲೆಸಿದವರಾಗಿದ್ದು, ವಿವಾಹದ ತರುವಾಯ, ಅರ್ಜಿದಾರರ ತಂದೆ ಆಂಧ್ರಪ್ರದೇಶದ ನಿವಾಸಿಯಾದುದರಿಂದ ಆಂಧ್ರಪ್ರದೇಶಕ್ಕೆ ತೆರಳಿರುತ್ತಾರೆ.ಅರ್ಜಿದಾರರ ತಂದೆ ವರ್ಗಾವಣೆಯಾಗುವಂಥ ವೃತ್ತಿಯಲ್ಲಿದ್ದು, ಪ್ರಸ್ತುತ ಭಾರತೀಯ ಸ್ಟೇಟ್ ಬ್ಯಾಂಕ್ನಲ್ಲಿ ಮುಖ್ಯ ವ್ಯವಸ್ಥಾಪಕರಾಗಿ ಹೈದರಾಬಾದ್ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ನಿವೇದಿಸಿಕೊಂಡಿರುತ್ತಾರೆ.ಮುಂದುವರೆದು, ಬುಲೆಟಿನ್ನ 2.2 ನೇ ಖಂಡದ

ಪರಂತುಕದಲ್ಲಿ ವಿಧಿಸಿರುವ ಮಾನದಂಡವನ್ನು ಅರ್ಜಿದಾರರು ಪೂರೈಸದಿರುವುದರಿಂದ, ಈಕೆಯನ್ನು ಕರ್ನಾಟಕದಲ್ಲಿನ ತೆಲುಗು ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಅಭ್ಯರ್ಥಿಯನ್ನಾಗಿ ಪರಿಗಣಿಸಲಾಗುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ.ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾತರ ಸ್ಥಾನವನ್ನು ಕ್ಲೇಮು ಮಾಡಲು ಕರ್ನಾಟಕದಲ್ಲಿ 10 ನೇ ತರಗತಿ ಒಳಗೊಂಡಂತೆ ಕರ್ನಾಟಕದಲ್ಲಿ ಹತ್ತು ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕೆಂಬ ಮಾನದಂಡವು ನಿರಂಕುಶವು ಹಾಗೂ ಅಕಾರಣಯುತವು ಹಾಗೂ ಸಂವಿಧಾನದ 14,29 ಹಾಗೂ 30 ನೇ ಅನುಚ್ಛೇದಗಳ ಉಲ್ಲಂಘನೆಯೂ ಆಗಿರುತ್ತದೆಂದೂ ವಾದಿಸಿರುತ್ತಾರೆ.ರಾಜ್ಯ ಸರ್ಕಾರಕ್ಕೆ, ಬುಲೆಟಿನ್‌ನ 2.2 ಖಂಡದ ಪರಂತುಕದಲ್ಲಿ ವಿಧಿಸಿದ ಮಾನದಂಡವನ್ನು ವಿಧಿಸಲು ಕಾನೂನಿನ ಯಾವುದೇ ಉಪಬಂಧಕ್ಕೆ ತನ್ನ ಅಧಿಕಾರವನ್ನು ಚಲಾಯಿಸಲು ಯಾವುದೇ ಆಧಾರವಿರುವುದಿಲ್ಲವೆಂದೂ ಹಾಗಾಗಿ, ಇದಕ್ಕೆ ಕಾನೂನಿನ ಬೆಂಬಲವಿಲ್ಲವೆಂದು ವಾದಿಸಿರುತ್ತಾರೆ.ರಿಟ್ ಅರ್ಜಿಗೆ ಪೂರಕವಾಗಿ, ಇವರು ಕೃತಿ ಲಖಿನಾ ವಿರುದ್ಧ ಕರ್ನಾಟಕ ಸರ್ಕಾರ [ಎಐಆರ್ 2018 ಎಸ್ 1657] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಹಾಗೂ ದಾರ್-ಅಸ್-ಸ್ಲಾಮ್ ಶೈಕ್ಷಣಿಕ ಸಂಸ್ಥೆ ವಿರುದ್ಧ ಭಾರತೀಯ ವೈದ್ಯಕೀಯ ಪರಿಷತ್ತು (ಲಾಸ್ (ಎಸ್ಸಿ) 2017 567) ಪ್ರಕರಣದಲ್ಲಿ 2017 ರ ಮೇ 9 ರಂದು ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ಆದೇಶವನ್ನು ಚ ಉಲ್ಲೇಖಿಸಿರುತ್ತಾರೆ.ಅಲ್ಲದೆ ರಿಟ್ ಅರ್ಜಿ ಸಂಖ್ಯೆ .36913/2017 ರಲ್ಲಿ ಎಂ. ಮೋನಿಷಾ -ವಿರುದ್ಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ 17.08.2017 ರಂದಿನ ತೀರ್ಪನ್ನೂ ಸಹ ಉಲ್ಲೇಖಿಸಲಾಗಿರುತ್ತದೆ.

4. ಮಾನ್ಯ ಅಡ್ವಕೇಟ್ ಜನರಲ್ರವರು, ರಾಜ್ಯದಲ್ಲಿ ಭಾಷಾ ಅಲ್ಪ ಸಂಖ್ಯಾತ ಸ್ಥಾನಮಾನವನ್ನು ಕೇಮು ಮಾಡುವ ವ್ಯಕ್ತಿಯು ಸಾಮಾನ್ಯವಾಗಿ ರಾಜ್ಯದ ನಿವಾಸಿಯಾಗಿರಬೇಕೆಂದು ನಿವೇದಿಸಿಕೊಂಡಿರುತ್ತಾರೆ.ಹಾಗಾಗಿ, ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತ ವರ್ಗದ ಸ್ಥಾನಮಾನವನ್ನು ಕ್ಲೇಮು ಮಾಡಲು ಸಾಮಾನ್ಯವಾಗಿ ರಾಜ್ಯದ ನಿವಾಸಿಯಾಗಿರಬೇಕೆಂಬುದನ್ನು ನಿರ್ಧರಿಸುವ ಸೂಕ್ತ ಮಾನದಂಡವನ್ನು ವಿಧಿಸುವ ಅಧಿಕಾರವನ್ನು ಹೊಂದಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ.ಒಬ್ಬ ವಿದ್ಯಾರ್ಥಿ 12 ನೇ ತರಗತಿ ಅಥವಾ 2ನೇ ಬ ಪಿಯುಸಿಯನ್ನು ಪೂರ್ಣಗೊಳಿಸಲು, ಆತನಿಗೆ ಹದಿನೇಳು ವರ್ಷ ವಯಸ್ಸಾಗಿರುತ್ತದೆ.ಆದ್ದರಿಂದ ವಿದ್ಯಾರ್ಥಿಯು ಕರ್ನಾಟಕದಲ್ಲಿ ಹತ್ತು ವರ್ಷಗಳ ಕಾಲ ವಿದ್ಯಾರ್ಥಿಯು ಓದಬೇಕೆಂದು ಬುಲೆಟಿನ್ನ 2.2 ಖಂಡದ ಉಪಬಂಧದಲ್ಲಿ ವಿಧಿಸಿರುವುದನ್ನು ಈ ನ್ಯಾಯಾಲಯದ ವಾರಂಟು ಮಧ್ಯೆ ಪ್ರವೇಶಿಕೆಯ ಮೂಲಕ ನಿರಂಕುಶ ಅಥವಾ ಅಕಾರಣಯುತವಾದುದೆಂದು ಹೇಳಲಾಗುವುದಿಲ್ಲವೆಂದೂ ತಮ್ಮ ವಾದವನ್ನು ಮಂಡಿಸಿರುತ್ತಾರೆ.

5. ಅಭ್ಯರ್ಥಿಯು ರಾಜ್ಯದಲ್ಲಿ ಸ್ನಾತಕ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪಡೆಯುವ ಉದ್ದೇಶಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನವನ್ನು ಕ್ಲೇಮು ಮಾಡಲು ಕರ್ನಾಟಕದಲ್ಲಿ ಹತ್ತು ವರ್ಷಗಳಷ್ಟು ಕಾಲ ವ್ಯಾಸಂಗ ಮಾಡಿರಬೇಕೆಂಬ ಮಾನದಂಡವು ನಿರಂಕುಶವಾದುದೆ ಹಾಗೂ ಭಾರತ ಸಂವಿಧಾನದ 14, 29, ಹಾಗೂ 30 ನೇ ಅನುಚ್ಛೇದಗಳ ಉಲ್ಲಂಘನೆಯಾಗಿರುತ್ತದೆಯೇ ಎಂಬುದನ್ನು ಈ ಅರ್ಜಿಯಲ್ಲಿ ಪರಿಗಣಿಸಬೇಕೆಂದು ಅಗತ್ಯಪಡಿಸಿದ ಪ್ರಶ್ನೆಯಾಗಿರುತ್ತದೆ.

6. ಕೇವಲ ಒಬ್ಬ ವ್ಯಕ್ತಿಯು ರಾಜ್ಯದಲ್ಲಿ ಜನ್ಮ ತಳೆದಿದ್ದರಾಗಲೀ ಹಾಗೂ ಕೇವಲ ಆ ವ್ಯಕ್ತಿಯ ತಂದೆ-ತಾಯಿಯರು ನಿವಾಸಿಗಳಾಗಿದ್ದರಾಗಲೀ, ಆ ಒಂದೇ ಕಾರಣಕ್ಕೆ ಆ ವ್ಯಕ್ತಿ ಆ ರಾಜ್ಯದ ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸಂಬಂಧಿಸಿದ ಸ್ಥಾನಮಾನ ಆತನಿಗೆ ಪ್ರದತ್ತವಾಗುವುದಿಲ್ಲ.ಕಾನೂನಿನಲ್ಲಿ ಒಬ್ಬ ವ್ಯಕ್ತಿಗಾಗಿ ರಾಜ್ಯದಲ್ಲಿ ಭಾಷಾ ಅಲ್ಪ ಸಂಖ್ಯಾತ ವರ್ಗಕ್ಕೆ ಸಂಬಂಧಿಸಿದ ಸ್ಥಾನಮಾನವನ್ನು ಕೇಮು ಮಾಡಲು ಸಾಮಾನ್ಯವಾಗಿ ಆ ವ್ಯಕ್ತಿ ಆ ರಾಜ್ಯದ ನಿವಾಸಿಯಾಗಿರಬೇಕು.ನಿವಾಸ ಎಂದರೆ ತಾತ್ಕಾಲಿಕ ನಿವಾಸ ಎಂಬ ಅರ್ಥವನ್ನು ಹೊಂದಿರುವುದಿಲ್ಲ.ಹಾಗಾಗಿ, ಒಬ್ಬ ವ್ಯಕ್ತಿಯನ್ನು ರಾಜ್ಯದಲ್ಲಿ ಸ್ನಾತಕ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ದಾಖಲಾತಿಯ ಉದ್ದೇಶಕ್ಕಾಗಿ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸ್ಥಾನಮಾನವನ್ನು ನೀಡುವುದಕ್ಕೆ ಸಂಬಂಧಿಸಿದಂತೆ, ಆತನನ್ನು ರಾಜ್ಯದ ನಿವಾಸಿಯೆಂದು ಪರಿಗಣಿಸಬೇಕೇ ಎಂಬುದನ್ನು ನಿರ್ಣಯಿಸಲು ರಾಜ್ಯವು ಯುಕ್ತ ಮಾನದಂಡವನ್ನು ವಿಧಿಸಬೇಕಾಗುತ್ತದೆ.ಈ ಸಂಬಂಧದಲ್ಲಿ ಸೂಕ್ತ ಮಾನದಂಡವನ್ನು ವಿಧಿಸಲು ರಾಜ್ಯಕ್ಕೆ ಅದರದೇ ಆದ ಅಧಿಕಾರವಿರುತ್ತದೆ.ನಮ್ಮ ಅಭಿಪ್ರಾಯದಲ್ಲಿ, ರಾಜ್ಯದಲ್ಲಿ ಸ್ನಾತಕ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ದಾಖಲಾತಿಯ ಉದ್ದೇಶಕ್ಕಾಗಿ

ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರೆಂದು ಅಭ್ಯರ್ಥಿಗಳನ್ನು ಪರಿಗಣಿಸಲು ಬುಲೆಟಿನ್ನ 2.2.ಖಂಡದಲ್ಲಿ ರಾಜ್ಯವು ವಿಧಿಸಿರುವ ಕರ್ನಾಟಕದಲ್ಲಿ ಹತ್ತು ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು ಎಂಬ ಮಾನದಂಡವನ್ನು ನಿರಂಕುಶ ಅಥವಾ ಸಂವಿಧಾನದ 14, 29 ಮತ್ತು 30 ನೇ ಅನುಚ್ಛೇದಗಳಿಗೆ ಅಯುಕ್ತವಾಗಿವೆ ಎಂದು ಹೇಳಲಾಗುವುದಿಲ್ಲ.ತದ್ವಿರುದ್ಧದ ವಾದದಲ್ಲಿ ಹುರುಳಿರುವುದಿಲ್ಲ.ಆದ್ದರಿಂದ ಸದರಿ ರಿಟ್ ಅರ್ಜಿಯನ್ನು ತಳ್ಳಿ ಹಾಕಲಾಗಿದೆ.

7. ಅರ್ಜಿದಾರರ ವಕೀಲರು ಉಲ್ಲೇಖಿಸಿದ ಸರ್ವೋಚ್ಚ ನ್ಯಾಯಾಲಯದ ಎರಡು ತೀರ್ಪುಗಳಲ್ಲಿ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರನ್ನು ನಿರ್ಧರಿಸಿರುವ ಯಾವುದೇ ಮಾನದಂಡವನ್ನು ವಿಧಿಸಿರುವುದಿಲ್ಲ.ಹಾಗಾಗಿ, ಅವು, ಈ ಅರ್ಜಿಯಲ್ಲಿ ಪ್ರಸ್ತಾಪಿಸಿದ ಪ್ರಶ್ನೆಯನ್ನು ಹೊಂದಿರುವುದಿಲ್ಲ.ಮೇಲೆ ಉಲ್ಲೇಖಿಸಿದ ಮೊನಿಷಾ ಪ್ರಕರಣದಲ್ಲಿ ಈ ಅರ್ಜಿಯಲ್ಲಿ ಯಾರ ಸಿಂಧುತ್ವವನ್ನು ಪ್ರಶ್ನಿಸಲಾಗಿರುತ್ತದೋ ಅದನ್ನು ಬುಲೆಟಿನ್ನ 2.2 ಖಂಡದ ಪರಂತುಕವು ಪರಿಗಣಿಸುವುದಿಲ್ಲ.ಮುಂದುವರೆದು ಯಾವುದೇ ಮಾನದಂಡವನ್ನು ರಾಜ್ಯದಲ್ಲಿನ ಭಾಷಾ ಅಲ್ಪಸಂಖ್ಯಾತ ನಿರ್ಧರಣೆಗಾಗಿ ಅದರಲ್ಲಿ ಯಾವುದೇ ಮಾನದಂಡವನ್ನು ವಿಧಿಸಿರುವುದಿಲ್ಲ.ಆದ್ದರಿಂದ ಸದರಿ ತೀರ್ಪ ಅರ್ಜಿದಾರರಿಗೆ ಯಾವುದೇ ನೆರವನ್ನು ನೀಡುವುದಿಲ್ಲ.

8. ಮೇಲೆ ಹೇಳಿದ ಕಾರಣಗಳಿಗಾಗಿ, ರಿಟ್ ಅರ್ಜಿಯಲ್ಲಿ ಯಾವುದೇ ಹುರುಳಿರುವುದಿಲ್ಲ.ತದನುಸಾರವಾಗಿ ವಜಾಗೊಳಿಸಲಾಗಿರುತ್ತದೆ.

ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.